ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-01-1978.

# *ವಿದೇಶಿ ತಂದೆಯ ವಿದೇಶಿ ಮಕ್ಕಳೊಂದಿಗಿನ ವಾರ್ತಾಲಾಪ.*

(विदेशी बाप की विदेशी बच्चों से मुलाकात)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವಿನಾಶಿ ಖುಷಿ(ಸಂತೋಷ) ಅಥವಾ ಅತೀಂದ್ರಿಯ ಸುಖವನ್ನು ಕೊಡುವವರು, ಮಾಯಾಪ್ರೂಫ್ ಆಗಿ ತಯಾರು ಮಾಡುವ ಬಾಪ್‌ದಾದಾ ವಿದೇಶಿ ಮಕ್ಕಳಪ್ರತಿ ಹೇಳಿದರು.**

ಇಂದು ವಿದೇಶಿಯಾದ ತಂದೆಯು ಈ ಸಾಕಾರ ಪ್ರಪಂಚದ ವಿದೇಶಿ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ಇಬ್ಬರೂ ವಿದೇಶಿಯರೇನೋ ಆಗಿದ್ದೇವೆ. ಇಂದು ವಿಶೇಷವಾಗಿ ವಿದೇಶಿ ಮಕ್ಕಳೊಂದಿಗೆ ಮಿಲನ ಮಾಡಲು ಏಕೆ ಬಂದಿದ್ದೇನೆ, ಗೊತ್ತಿದೆಯೇ? ನಿಮ್ಮ ವಿಶೇಷತೆಯನ್ನು ಅರಿತುಕೊಂಡಿದ್ದೀರಾ? ಆ ವಿಶೇಷತೆಯ ಕಾರಣದಿಂದಲೇ ತಂದೆಯೂ ಸಹ ವಿಶೇಷ ರೂಪದಿಂದ ಬಂದಿದ್ದಾರೆ. ವಿದೇಶಿಯರಲ್ಲಿ ಯಾವ ವಿಶೇಷತೆ ಇದೆ? ಕಲ್ಪದ ಹಿಂದೆ ನನ್ನವರಾಗಿದ್ದ ಮಕ್ಕಳೇ ಈಗ ದೂರ ದೂರ ಈ ವ್ಯಕ್ತ ದೇಶಗಳಲ್ಲಿ ಭಿನ್ನ ಭಿನ್ನ ನಾಮ, ರೂಪ, ಧರ್ಮಗಳಲ್ಲಿ ಯಾರು ಹೋಗಿಬಿಟ್ಟಿದ್ದೀರೋ ಅವರು ಮತ್ತೆ ನಿಮ್ಮ ಅಗಲಿಹೋಗಿರುವ ತಂದೆ ಹಾಗೂ ಪರಿವಾರದೊಂದಿಗೆ ನಿಮ್ಮ ನೈಜ ಸ್ಥಾನದಲ್ಲಿ ಬಂದು ತಲುಪಿದ್ದೀರೆಂದು ತಂದೆಗೆ ಗೊತ್ತಿದೆ. ಅಂತಹ ಅನುಭವ ಆಗುತ್ತಿದೆಯೇ? ನಿಮಗೆ ತಂದೆಯನ್ನು ಪಡೆಯುವ ಹಾಗೂ ಪರಿವಾರವನ್ನು ಪಡೆಯುವ ಆನಂದವು ಎಷ್ಟು ಇದೆಯೋ ಅದಕ್ಕಿಂತಲೂ ಹೆಚ್ಚು ಆನಂದವು ತಂದೆಗೆ ಇದೆ. ಏಕೆಂದರೆ ಮಕ್ಕಳೇ, ನನಗೆ ಶೃಂಗಾರ ಆಗಿದ್ದೀರಿ ಎಂದು ತಂದೆಗೆ ಗೊತ್ತಿದೆ. ಹೇಗೆ ಶೃಂಗಾರ ಇಲ್ಲದಿದ್ದರೆ ಯಾವುದೇ ವ್ಯಕ್ತಿ ಅಥವಾ ಸ್ಥಾನವು ಶೋಭಿಸುವುದಿಲ್ಲವೋ ಹಾಗೆಯೇ ತಂದೆಗೂ ಸಹ ಮಕ್ಕಳು ಅಲಂಕಾರಹೀನರಾಗಿದ್ದರೆ ಒಳಿತೆನಿಸುವುದಿಲ್ಲ. ವಿದೇಶೀ ಆತ್ಮರಲ್ಲಿ ಒಂದು ವಿಶೇಷತೆ ಇರುವ ಕಾರಣದಿಂದ ತಂದೆಗೆ ಅವರಮೇಲೆ ವಿಶೇಷವಾಗಿ ಹೆಚ್ಚು ಪ್ರೀತಿ ಇದೆ, ಆ ವಿಶೇಷತೆ ಏನು? ಹೇಗೆ ಭಾರತದಲ್ಲಿ ಒಂದು ಆಟವನ್ನು ಆಡುವಾಗ ಒಂದು ಬಟ್ಟೆಯ ಮರೆಯಲ್ಲಿ ಅನೇಕ ವಸ್ತುಗಳನ್ನು ಮುಚ್ಚಿಡುತ್ತಾರೆ ಮೇಲೆ ಬಟ್ಟೆಯ ಹೊದಿಕೆಯನ್ನು ಹೊದಿಸುತ್ತಾರೆ, ಆಮೇಲೆ ಹೊದಿಕೆಯನ್ನು ತೆಗೆದು ಎಲ್ಲ ವಸ್ತುವನ್ನೂ ನೋಡಿ ಎಂದು ಮಕ್ಕಳಿಗೆ ಹೇಳುತ್ತಾರೆ.

ಆನಂತರ ಮತ್ತೆ ಹೊದಿಕೆಯನ್ನು ಹೊದಿಸಿಬಿಡುತ್ತಾರೆ. ಆನಂತರ ಮಕ್ಕಳ ಬುದ್ಧಿಯ ಪರೀಕ್ಷೆಯು ಮಾಡುತ್ತಾರೆ. ಯಾವ ಯಾವ ವಸ್ತುಗಳು ಇದ್ದವು ಹಾಗೂ ಎಷ್ಟು ವಸ್ತುಗಳು ಇದ್ದವು ಎಂದು ಕೇಳುತ್ತಾರೆ. ಯಾವ ವಸ್ತುಗಳು ಎಂತಹವು ಇದ್ದವೋ, ಎಷ್ಟು ಇದ್ದವೋ ಅಷ್ಟನ್ನೇ ಜ್ಞಾಪಿಸಿಕೊಂಡು ಹೇಳುತ್ತಾರೆ. ಅದರ ಅನುಸಾರವಾಗಿ ಅವರಿಗೆ ಅಂಕಗಳು ದೊರೆಯುತ್ತವೆ. ಈ ಬುದ್ಧಿಯ ಆಟವನ್ನು ಮಕ್ಕಳಿಗೆ ಆಡಿಸಲಾಗುತ್ತದೆ. ಹಾಗೆಯೇ ವಿದೇಶಿ ಮಕ್ಕಳೂ ಸಹ ಭಿನ್ನ ಧರ್ಮ, ಭಿನ್ನ ತತ್ವಶಾಸ್ತ್ರ, ಭಿನ್ನ ಭಿನ್ನ ಪ್ರಕಾರದ ನಡವಳಿಕೆಯ- ಈ ಹೊದಿಕೆಯ ಒಳಗೆ ಮರೆಯಾಗಿರುವ ತಂದೆಯು ಯಾರಾಗಿದ್ದೇನೆ, ಹೇಗಿದ್ದಾರೋ ಹಾಗೆಯೇ ತಿಳಿದುಕೊಂಡಿದ್ದೀರಿ. ಈ ಬುದ್ಧಿಯ ಚಮತ್ಕಾರದ ಕಾರಣದಿಂದ ವಿದೇಶಿ ಮಕ್ಕಳೊಂದಿಗೆ ವಿಶೇಷ ಸ್ನೇಹ ಇದೆ, ತಿಳಿಯಿತೇ.

ಈ ಬುದ್ಧಿಯ ಆಟದ ಕೋಟೆಯಲ್ಲಿ ಕೆಲವರು ಉತ್ತೀರ್ಣರಾಗಿದ್ದಾರೆ. ಅಂತಹ ಮಕ್ಕಳನ್ನು ನೋಡಿ ಬಾಪ್‌ದಾದಾ ಸಹ ಸಂತೋಷ ಪಡುತ್ತೇವೆ. ನೀವೆಲ್ಲರೂ ಸಂತೋಷ ಪಡುತ್ತೀರಾ? ಇದೇ ಆನಂದದ ಗೀತೆಯನ್ನು ಹಾಡುತ್ತಾ ಇರಿ, "ಏನನ್ನು ಪಡೆಯಬೇಕಾಗಿತ್ತೋ ಅದನ್ನು ಪಡೆದುಬಿಟ್ಟೆನು ಎನ್ನುವ ಆನಂದದಲ್ಲಿ ಇದ್ದರೆ ಯಾವುದೇ ಪ್ರಕಾರದ ತೊಡಕು ಅಥವಾ ಜಿಗುಪ್ಸೆಯು ಬರಲು ಸಾಧ್ಯವಿಲ್ಲ. ಎಂದರೆ ಮಾಯೆಗೆ ಮಣಿಯದವರು ಆಗಿಬಿಡುವಿರಿ. ನಿಮ್ಮ ಆದರ್ಶವನ್ನು ಬಾಪ್‌ದಾದಾ ಎಲ್ಲರಿಗೂ ತೋರಿಸುವಂತಹ ಮಾಯಾಜೀತರು ಆಗಿಬಿಡಿ. ಅಂತಹ ಮಾದರಿ ಆಗಿದ್ದೀರಾ? ಈಗ ನಾನು ಅಂತಹ ಆದರ್ಶ ಆಗಿದ್ದೇನೆ, ಬಾಪ್‌ದಾದಾ ವಿಶ್ವದ ಮುಂದೆ ನನ್ನನ್ನು ಆದರ್ಶ ಎಂದು ಇಡಬಹುದು ಎಂದು ತಿಳಿದುಕೊಂಡಿರುವವರು ಯಾರಿದ್ದೀರಿ? ಸದಾ ಸಿದ್ಧರು ಆಗಿಲ್ಲ, ಸಿದ್ಧರು ಆಗಿದ್ದೀರಾ? ಏಕೆಂದರೆ ವಿದೇಶಗಳಲ್ಲಿ ಇರುವ ಮಕ್ಕಳಿಗೆ ಇದೂ ಸಹ ಒಂದು ವಿಶೇಷ ಲಿಫ್ಟ್ ಆಗಿದೆ. ಇದರಿಂದ ಸ್ವಯಂ ತಮ್ಮನ್ನು ವಿಶ್ವದ ಮುಂದೆ ಪ್ರಖ್ಯಾತ ಮಾಡಿಕೊಂಡು ತಂದೆಯ ಪರಿಚಯವನ್ನು ಕೊಡಬಹುದು. ಇಂತಹ ಸೇವೆಯನ್ನು ಮಾಡಿದರೆ ಹೆಚ್ಚಿನ ಅಂಕಗಳು ದೊರೆಯುತ್ತದೆ. ಇಂತಹ ಸೇವೆಯನ್ನು ಮಾಡಿದ್ದೀರೋ ಅಥವಾ ಮಾಡಬೇಕೋ? ಭಾರತದ ಆತ್ಮರು ನಿಮ್ಮನ್ನು ನೋಡಿ ಇವರು ತಂದೆಯನ್ನು ಅರಿತುಕೊಂಡಿದ್ದಾರೆ, ಆದರೆ ನಾವು ಅರಿತುಕೊಂಡಿಲ್ಲ. ಎಂದು ತಿಳಿದುಕೊಳ್ಳುವರು. ಪರಿಚಯಗಳಿಸಿರುವ ನಿಮ್ಮ ಚಹರೆಯನ್ನು ನೋಡಿ ಭಾರತೀಯರಿಗೆ ನಾವು ನಮ್ಮ ಭಾಗ್ಯವನ್ನು ಕಳೆದುಕೊಂಡೆವು ಎಂದು ಪಶ್ಚಾತಾಪ ಆಗುವುದು. ಆದ್ದರಿಂದ ನೀವೆಲ್ಲರೂ ಸೇವೆಗಾಗಿ ನಿಮಿತ್ತ ಆಗಿದ್ದೀರಿ. ಈಗ ದೆಹಲಿ ಸಮ್ಮೇಳನದಲ್ಲಿ ಕೂಡ ವಿದೇಶದಿಂದ ಬಂದಿರುವ ನಿಮ್ಮೆಲ್ಲರ ವಿಶೇಷ ಸೇವೆಯು ಯಾವುದಾಗಿದೆಯೆಂದರೆ ನಿಮ್ಮಲ್ಲಿ ಯಾವುದಾರೂ ಆತ್ಮವನ್ನು ಯಾರಾದರೂ ನೋಡಿದರೆ ಪ್ರತಿಯೊಂದು ಚಹರೆಯಿಂದ ತಂದೆಯ ಮೂಲಕ ಪ್ರಾಪ್ತಿಯಾಗಿರುವ ಅವಿನಾಶಿ ಆನಂದ, ಅತೀಂದ್ರಿಯ ಸುಖದ, ಅವಿನಾಶಿ ಶಾಂತಿಯ ಕಾಂತಿಯು ಕಂಡುಬರಬೇಕು. ನಿಮ್ಮೆಲ್ಲರ ಚಹರೆಯು ತಂದೆಯ ಮೂಲಕ ದೊರೆತಿರುವ ಆಸ್ತಿಯನ್ನು(ವಾರಸತ್ವ) ಪ್ರದರ್ಶಿಸುವ ಕನ್ನಡಿ ಆಗಿಬಿಡುವುದು. ಅಂತಹ ಸೇವೆಯನ್ನು ಮಾಡುವವರಿಗೆ ವಿಶೇಷ ಅಂಕಗಳ ಬಹುಮಾನವು ಬಾಪ್‌ದಾದಾರವರ ಮೂಲಕ ದೊರೆಯುವುದ. ಈ ಸೇವೆಯೂ ಸಹಜ ಆಗುವುದು ಅಲ್ಲವೇ, ಅಥವಾ ಕಷ್ಟಕರವೋ?

ಹೇಗೆ ಯಾವುದಾದರೂ ಪ್ರಕರ ಪ್ರಕಾಶ(ಬೆಳಕು) ತನ್ನ ಕಡೆಗೆ ಆಕರ್ಷಣೆ ಮಾಡುತ್ತದೆಯೋ ಹಾಗೆಯೇ ನೀವೆಲ್ಲಾ ಆತ್ಮರು ಪ್ರಕಾಶ ಹಾಗೂ ಶಕ್ತಿಯರೂಪ ಆಗಿರಿ. ತಂದೆಯಕಡೆ ಆಕರ್ಷಣೆ ಮಾಡಿರಿ. ಸಮ್ಮೇಳನದಲ್ಲಿ ಯಾವ ಸೇವೆಯನ್ನು ಮಾಡಬೇಕು ಗೊತ್ತಾಯಿತೇ? ವಿದೇಶದಲ್ಲಿ ಇರುವ ಮಕ್ಕಳ ಬಳಿ ಮಾಯೆಯು ಬರುತ್ತದೆಯೇ? ಗಾಬರಿ ಆಗುವವರು ಅಲ್ಲ ತಾನೆ? ಪಣ ತೊಡುವವರು ಆಗಿದ್ದೀರಿ ತಾನೇ? ಮಾಯೆಗೆ ಬಾ ಹಾಗೂ ಬೀಳ್ಕೊಡಿಗೆಯನ್ನು ತೆಗೆದುಕೊಂಡು ಹೋಗು ಎಂದು ಸವಾಲು ಹಾಕುತ್ತೀರಿ ಅಲ್ಲವೇ? ಮಾಯೆ ಬರುವುದು ಎಂದರೆ ಅನುಭವಿ ಆಗುವುದು, ಆದ್ದರಿಂದ ಮಾಯೆಗೆ ಎಂದೂ ಗಾಬರಿ ಆಗಬಾರದು. ಒಂದು ವೇಳೆ ಗಾಬರಿ ಆದರೆ ಮಾಯೆಯೂ ಸಹ ವಿಕರಾಳ ರೂಪವನ್ನು ಧಾರಣೆ ಮಾಡುವುದು. ಗಾಬರಿ ಆಗದಿದ್ದರೆ ಅದು ನಮಸ್ಕಾರ ಮಾಡುವುದು. ಅದು ಕಾಗದದ ಸಿಂಹ ಆಗಿದೆಯೇ ಹೊರತು ಮತ್ತೇನೂ ಅಲ್ಲ. ಆದ್ದರಿಂದ ನೀವು ಕಾಗದದ ಸಿಂಹಕ್ಕೆ ಗಾಬರಿ ಆಗುವವರಾಗಿದ್ದೀರಾ? ಅದು ವಿಕರಾಳ ರೂಪವನ್ನು ಧರಿಸಿದರೂ ಕೂಡ ಶಕ್ತಿಹೀನ ಆಗಿದೆ. ಹೇಗೆ ಇಲ್ಲಿಯೂ ಸಹ ಭಯಂಕರ ಮುಖವಾಡವನ್ನು ಹಾಕಿಕೊಂಡು ಹೆದರಿಸುತ್ತಾರೆ. ಆದರೆ ಮುಖವಾಡದ ಒಳಗೆ ಸಾಧಾರಣ ಮನುಷ್ಯರು ಇರುತ್ತಾರೆ. ಬಾಹ್ಯದ ಮುಖವಾಡವನ್ನು ತೆಗೆದುಹಾಕಿದರೆ ಯಾವ ಹೆದರಿಕೆಯೂ

ಆಗುವುದಿಲ್ಲ. ಆದ್ದರಿಂದ ಒಂದು ಮೇಳೆ ಬಾಹ್ಯದ ರೂಪವನ್ನು ನೋಡಿ ಹೆದರಿದರೆ ನಪಾಸಾಗಿಬಿಡುವಿರಿ. ಮಾಯೆಯಿಂದ ಸೋಲು ಹೆಚ್ಚು ಆಗುತ್ತದೆಯೋ ಅಥವಾ ವಿಜಯವು ಹೆಚ್ಚು ಆಗುತ್ತದೆಯೋ?

ವಿದೇಶದಿಂದ ಬಂದಿರುವ ಮಕ್ಕಳಲ್ಲಿ ನಾನು 108ರ ಮಾಲೆಯ ಮಣಿಯಲ್ಲಿ ಒಂದಾಗಿದ್ದೇನೆ ಎಂದು ತಿಳಿದುಕೊಂಡಿರುವವರು ಯಾರಿದ್ದೀರಿ. ನಿಶ್ಚಯವಿದ್ದರೆ ವಿಜಯವು ಆಗಿಯೇಬಿಡುತ್ತದೆ. ದುರ್ಬಲವಾದ ಲಕ್ಷ್ಯವನ್ನು ಎಂದಿಗೂ ಇಟ್ಟುಕೊಳ್ಳಬೇಡಿ, ನಾನೇ ಕಲ್ಪದ ಹಿಂದಿನ ವಿಜಯಶಾಲಿ ರತ್ನ ಆಗಿದ್ದೆ ಹಾಗೂ ಸದಾ ಆಗಿರುವೆನು ಎನ್ನುವ ವಿಶೇಷ ಲಕ್ಷ್ಯವನ್ನು ಸದಾ ಇಟ್ಟುಕೊಳ್ಳಿರಿ. ಆಗ ಸದಾ ನಿಮ್ಮನ್ನು ವಿಜಯಶಾಲಿ ಆತ್ಮ ಎಂದೇ ಅನುಭವ ಮಾಡುವಿರಿ.

ನೀವು ಅನೇಕ ದೇಶಗಳಿಂದ ಬಂದಿದ್ದೀರಿ. ಯಾವ ಯಾವ ದೇಶಗಳಿಂದ ತಂದೆಯ ಮಕ್ಕಳು ಜನ್ಮ ಪಡೆದಿದ್ದೀರೋ ಆ ಸ್ಥಾನಗಳಿಗೂ ಸಹ ಮಹತ್ವ ಇದೆ. ಈ ಸ್ಥಾನವೂ ಸಹ ಯಾವುದಾದರೋಂದು ರೂಪದಿಂದ ಸ್ಮೃತಿಚಿಹ್ನೆ ಆಗಿಬಿಡುತ್ತದೆ. ನೀವು ವಿಶೇಷವಾಗಿ ಆ ಸ್ಥಾನಗಳಲ್ಲಿ ಸುತ್ತುತ್ತಾ ಇರುವಿರಿ. (ವಿದ್ಯುಚ್ಛಕ್ತಿಯ ಸರಬರಾಜು ನಿಂತುಹೋಯಿತು) ಅಶರೀರಿ ಆಗುವುದು ಎಷ್ಟು ಸಹಜ ಆಗಬೇಕೆಂದರೆ ಹೇಗೆ ಸ್ಥೂಲ ವಸ್ತುವನ್ನು ಕಳಚಿಹಾಕುತ್ತೀರೋ ಹಾಗೆಯೇ ಈ ದೇಹಾಭಿಮಾನ ಎಂಬ ವಸ್ತ್ರವನ್ನು ಒಂದು ಸೆಕೆಂಡ್‌ನಲ್ಲಿ ತೆಗೆದು ಹಾಕಬೇಕು. ಯಾವಾಗಬೇಕಾದರೆ ಆಗ ಧರಿಸಬೇಕು ಹಾಗೂ ಯಾವಾಗ ಬಯಸಿದರೆ ಆಗ ದೂರ ಆಗಿಬಿಡಬೇಕು. ಆದರೆ ಈ ಅಭ್ಯಾಸವು ಯಾವಾಗ ಇರುವುದೆಂದರೆ ಯಾವುದೇ ಪ್ರಕಾರದ ಬಂಧನವು ಇಲ್ಲದಿರುವಾಗ, ಒಂದು ವೇಳೆ ಮನಸ್ಸಿನ ಸಂಕಲ್ಪದ ಬಂಧನವಾದರೂ ಇದ್ದರೆ ದೇಹಾಭಿಮಾನದಿಂದ ದೂರ ಆಗಲು ಸಾಧ್ಯವಾಗುವುದಿಲ್ಲ. ಹೇಗೆ ಯಾವುದಾದರೂ ಬಿಗಿಯಾದ ಉಡುಪು ಇದ್ದರೆ ಸಹಜವಾಗಿ ಹಾಗೂ ಬೇಗ ತೆಗೆದುಹಾಕಲು ಸಾಧ್ಯವಾಗುವುದಿಲ್ಲ. ಅದೇ ಪ್ರಕಾರವಾಗಿ ಮನಸ್ಸು, ಮಾತು, ಕರ್ಮ, ಸಂಬಂಧದಲ್ಲಿ ಒಂದು ವೇಳೆ ಆಸಕ್ತಿ ಅಥವಾ ಮಮತೆ ಇದ್ದರೆ ಅತೀತರಾಗಲು ಸಾಧ್ಯವಾಗುವುದಿಲ್ಲ. ಇಂತಹ ಅಭ್ಯಾಸವನ್ನು ಸಹಜವಾಗಿ ಮಾಡಬಹುದು. ಎಂತಹ ಸಂಕಲ್ಪ ಮಾಡುತ್ತೀರೋ ಅಂತಹ ಸ್ವರೂಪ ಆಗಬೇಕು. ಸಂಕಲ್ಪದ ಜೊತೆ ಜೊತೆಗೆ ಸ್ವರೂಪ ಆಗಿಬಿಡುತ್ತೀರೋ ಅಥವಾ ಸಂಕಲ್ಪದ ನಂತರ ಸ್ವರೂಪ ಆಗುವುದರಲ್ಲಿ ಸಮಯವು ಹಿಡಿಯುತ್ತದೆಯೋ? ಸಂಕಲ್ಪ ಮಾಡಿದ ಕೂಡಲೆ ಅಶರೀರಿ ಆಗಿಬಿಡಿ, ಮಾಸ್ಟರ್ ಪ್ರೇಮಸಾಗರನ ಸ್ಥಿತಿಯಲ್ಲಿ ಸ್ಥಿತರಾಗಬೇಕು ಎನ್ನುವ ಸಂಕಲ್ಪವನ್ನು ಮಾಡಿದ ಕೂಡಲೆ ಆ ಸ್ವರೂಪ ಆಗಿಬಿಡಬೇಕು. ಅಂತಹ ಅಭ್ಯಾಸದ ಆಧಾರದಿಂದಲೇ ವಿದ್ಯಾರ್ಥಿ ವೇತನವನ್ನು ತೆಗೆದುಕೊಳ್ಳುವಿರಿ.

ಇಲ್ಲಿಯವರೆಗೆ ವಿದೇಶಿಯರು ಒಂದು ಯೋಜನೆಯನ್ನೂ ಕಾರ್ಯಗತ ಮಾಡಿಲ್ಲ. ಯಾವ ಯೋಜನೆಯನ್ನು ಕೊಡಲಾಗಿತ್ತು ಎಂಬುದು ನೆನಪಿದೆಯೇ? ಇನ್ನೂ ಭಾರತದ ಕುಂಭಕರ್ಣರು ಗಾಢ ನಿದ್ರೆಯಲ್ಲಿ ಮಲಗಿದ್ದಾರೆ. ಈಗ ಸಮ್ಮೇಳನದಲ್ಲಿ ಹೇಗೆ (ಜ್ಞಾನದ) ಪನ್ನೀರು ಚುಮಕಿಸುವುದನ್ನು ನೋಡಿದಿರಿ. ಪೂರ್ತಿ ಗಾಢನಿದ್ರೆಯಲ್ಲಿ ಇರುವವರನ್ನು ನೀರು ಚುಮುಕಿಸಿ ಎಚ್ಚರಗೊಳಿಸಬೇಕಾಗುತ್ತದೆ. ಈ ಯೋಜನೆಯನ್ನು ಕಾರ್ಯಗತ ಮಾಡಿರಿ. ನಾವೂ ಸಹ ಎಚ್ಚರವಾಗಬೇಕು ಹಾಗೂ ಇಂತಹವರಾಗಬೇಕು ಎಂದು ಅವರು ಅರಿತುಕೊಳ್ಳುವಂತೆ ನೀವು ಭಾರತದ ಮುಂದೆ ಬಂದಾಗ ಎಲ್ಲರ ಗಮನವು ಅವರ ಮಾತಿನ ಕಡೆಗೆ ಇಷ್ಟವಿಲ್ಲದಿದ್ದರೂ ಹರಿಯಬೇಕು. ಯಾವ ಕಡೆಯಿಂದಾದರೂ ಅಂತಹವರನ್ನು ತಯಾರು ಮಾಡಿದ್ದೀರಾ? ಎಲ್ಲಾ ಸೇವಾಸ್ಥಾನಗಳೂ ಸರಿಯಾಗಿ ನಡೆಯುತ್ತಿವೆಯೇ? ಎಲ್ಲರೂ ಸ್ವಯಂ ನಿಮ್ಮೊಂದಿಗೆ ಹಾಗೂ ಸೇವೆಯ ಬಗ್ಗೆ ಸಂತುಷ್ಟರಾಗಿದ್ದೀರಾ? ನೀವು ಅತಿ ಸೌಭಾಗ್ಯಶಾಲಿ ಆಗಿದ್ದೀರಿ. ನಾವು ವಿಶೇಷವಾಗಿ ಬಹಳ ಕಾಲದಿಂದ ಅಗಲಿ-ಮರಳಿ ಸಿಕ್ಕಿರುವ ಪ್ರೀತಿಯ ಮಕ್ಕಳಾಗಿದ್ದೇವೆ ಎಂದು ನಿಮ್ಮ ಬುದ್ಧಿಯಲ್ಲಿದೆ. ಎಲ್ಲಾ ಸೇವಾಕೇಂದ್ರಗಳಲ್ಲಿ ಓಟದ ಪಂದ್ಯದಲ್ಲಿ ಮೊದಲನೆಯ ಸ್ಥಾನಗಳಿಸುವವರು ಯಾರು? ಪ್ರತಿಯೊಂದು ದೇಶದ ವಿಶೇಷತೆಯು ತನ್ನದೇ ಆಗಿದೆ. ಲಂಡನ್ ನಗರವು ನಿಮಿತ್ತ ಆಗಿರುವುದರಿಂದ ಯೋಜನಾಕೇಂದ್ರ ಆಗಿಬಿಟ್ಟಿದೆ. ಈ ವಿಶೇಷತೆಯ ಕಾರಣದಿಂದ ಪ್ರಥಮ ಸ್ಥಾನ ಪಡೆದಿರುವುದು ಎಂದು ಹೇಳಬಹುದು. ಆದರೆ ಸೇವಾಧಾರಿ ಹಾಗೂ ಪ್ರಚಾರ ಮಾಡುವ ವಿಶೇಷ ಗುಣದ ಸೇವೆಯಲ್ಲಿ ಗಯಾನ ಮೊದಲನೆಯ ಸ್ಥಾನ ಪಡೆದಿದೆ. ಸಂಖ್ಯೆಯ ಕಾರಣದಿಂದ ಮರೌಸಿಯಸ್ ಪ್ರಥಮ ಸ್ಥಾನ ಪಡೆದಿದೆ. ಮತ್ತು ಉಸಾಕಾ ಎಷ್ಟೆಲ್ಲಾ ಸಹನೆ

ಮಾಡುತ್ತಾ ಪರಿಸ್ಥಿತಿಯಿಂದ ಪಾರಾಗುವುದರಲ್ಲಿ ಗಡಿಬಿಡಿಯ ಪರಿಸ್ಥಿತಿ ಇದ್ದರೂ ಕೂಡಾ ಅಚಲ ಆಗಿರುವುದರಲ್ಲಿ ಪ್ರಥಮ ಸ್ಥಾನದಲ್ಲಿದೆ. ಆಸ್ಟ್ರೇಲಿಯಾದ ವಿಶೇಷತೆಯೂ ಸಹ ಇದೆ. ಅದು ಯಾವುದೆಂದರೆ ಒಬ್ಬರಿಗೊಬ್ಬರು ಒಂದು ದೀಪದಿಂದ ಅನೇಕ ದೀಪಗಳನ್ನು ಹಚ್ಚಿ ದೀಪಾವಳಿಯನ್ನು ಮಾಡುವುದರಲ್ಲಿ ಮೊದಲನೆಯದಾಗಿದೆ. ಆಸ್ಟ್ರೇಲಿಯಾವು ಇನ್ನೂ ವೃದ್ಧಿ ಆಗುವುದು. ಯೋಜನಾ ಬುದ್ಧಿಯೂ ಇದೆ ಹಾಗೂ ಯೋಜನೆಯನ್ನೂ ಸಹ ಬಹಳ ಚೆನ್ನಾಗಿ ರೂಪಿಸುತ್ತೀರಿ. ಒಂದುವೇಳೆ ಈ ಎಲ್ಲಾ ಯೋಜನೆಗಳನ್ನು ಕಾರ್ಯಗತ ಮಾಡಿದರೆ ಲಂಡನ್ ಗಿಂತಲೂ ಮುಂದೆ ಹೋಗಬಹುದು. ಆದರೆ ಈಗ ಬುದ್ಧಿಯಲ್ಲಿ ಮಾತ್ರ ಯೋಜನೆಗಳಿವೆ, ಕಾರ್ಯರೂಪದಲ್ಲಿ ತಂದಿಲ್ಲ.

ಒಂದೊಂದು ರತ್ನವೂ ಅಮೂಲ್ಯವಾದುದಾಗಿದೆ. ಆದರೆ ನಿಮ್ಮ ಬೆಲೆಯನ್ನು ರಂಗಮಂಟಪದ ಮೇಲೆ ತಂದಿಲ್ಲ. ಇದನ್ನು (ಮಾರಿಯಾ) ಮಾಡಬುಹುದು ಎಂದು ಬಾಪ್ ದಾದಾರವರಿಗೆ ಭರವಸೆ ಇದೆ. ಕೇವಲ ತ್ಯಾಗ ಹಾಗು ತಪಸ್ಸಿನ ವೇಷವನ್ನು ಹಾಕಿಕೊಂಡು ರಂಗಮಂಟಪದಲ್ಲಿ ಬಂದರೆ ವಿಜಯವು ನಿಮ್ಮ ಕೊರಳಿನ ಹಾರ ಆಗಿಬಿಡುವುದು. ಸೇವೆಯನ್ನು ಮಾಡಿ ಆಮೇಲೇ ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಭಾರತಕ್ಕೆ ಬನ್ನಿರಿ. ಆಸ್ಟ್ರೇಲಿಯಾದ ಭೂಮಿಯು ತುಂಬಾ ಉತ್ತಮವಾದುದು.

ಜರ್ಮನಿಯಲ್ಲಿ ಹೆಚ್ಚು ಪ್ರಾಚಾರವನ್ನು ಮಾಡುವ ಆತ್ಮರು ಬರಬಹುದು. ಚೆನ್ನಾಗಿ ಶ್ರಮಿಸುತ್ತಿದ್ದೀರಿ. ಈಗ ಅಲ್ಲಿಂದ ಅಂತಹ ಯಾರಾದರು ನಿತ್ಯ ಜೀವನದಲ್ಲಿ ವಿಶೇಷ ಆದರ್ಶ ಆಗಿರುವವರು ಬೇಕಾಗಿದೆ. ಅವರನ್ನು ಎದುರಿನಲ್ಲಿ ನೋಡುತ್ತಾ ಆತ್ಮರಿಗೆ ವಿಶೇಷ ಪ್ರೇರಣೆಯು ದೊರಕಲಿ, ಆದರೆ ಉತ್ಸಾಹ ಉಲ್ಲಾಸದಲ್ಲಿ ಮೊದಲನೆಯ ದಾಗಿದೆ. ಲೈಸ್ಟರ್, ಲಂಡನ್ ಜೊತೆಗೇ ಇದೆ. ಲೈಸ್ಟರ್ ನವರದೂ ಸಹ ಮಹತ್ಕಾರ್ಯ ಆಗಿದೆ. ಲೈಸ್ಟರ್ ನವರಲ್ಲಿ ನಿಶ್ಚಯಬಿದ್ಧಿಯವರಾಗಿ ವಿಜಯವನ್ನು ಪಡೆಯುವವರು ಬಹಳ ಉತ್ತಮರು ಇದ್ದಾರೆ. ಪರಿವಾರಕ್ಕೆ ಪರಿವಾರವೇ ಆದರ್ಶ ಆಗುವುದಕ್ಕಾಗಿ ಬಹಳ ಚೆನ್ನಾಗಿ ತಯಾರಾಗಿದ್ದಾರೆ. ಬಾಪ್‌ದಾದಾರವರಿಗೆ ತಂಬಾ ಪ್ರೀತಿಯವರಾಗಿದ್ದಾರೆ ನೈರೋಬಿ ಹಾಗೂ ಬುಲ್-ವಾಯಾ ತೀವ್ರ ಪುರುಷಾರ್ಥಿ ಹಾಗೂ ತತ್ಪರತೆಯಲ್ಲಿ (ಲಗನ್) ಮಗ್ನ ಆಗಿರುವವರಲ್ಲಿ ಕಡಿಮೆ ಏನಿಲ್ಲ. ಅದರಲ್ಲಿ ಸ್ಥಾನವು ಒಂದೇ ಇದೆ. ಜ್ಯೋತಿಗೆ ಬಲಿಯಾಗುವ ಪತಂಗ ಆಗುವ ಆದರ್ಶವನ್ನು ಪ್ರತ್ಯಕ್ಷದಲ್ಲಿ ನೋಡಿದಿರಲ್ಲವೇ, ಒಂದು ವೇಳೆ ಆ ನಿಮಿತ್ತ ಆಗಿರುವ ಆತ್ಮವು ಎಲ್ಲಿಯಾದರೂ ತನ್ನ ಅನುಭವವನ್ನು ತಿಳಿಸಿದರೆ ಅವರ ಮಾತೂ ಸಹ ಸ್ವಲ್ಪ ಕಾರ್ಯವನ್ನು ಮಾಡಬಹುದು. ಹಾಂಕಾಂಗ್ನ ಧರಣಿಯಲ್ಲಿ ಸ್ನೇಹಿ ಹಾಗೂ ಸಹಯೋಗಿ ಆತ್ಮರ ವಿಶೇಷತೆ ಇದೆ. ಹಾಗೂ ಶಕ್ತಿಶಾಲಿ ಆತ್ಮರೂ ಇದ್ದಾರೆ. ಆದರೆ ಇನ್ನೂ ಮರೆಯಲ್ಲಿ ಇದ್ದಾರೆ. ಸಮಯ ಬಂದಾಗ ಹಾಂಕಾಂಗ್ ಧರಣಿಯಲ್ಲಿ ಮರೆಯಲ್ಲಿರುವ ರತ್ನಗಳು ಎಲ್ಲರ ಮುಂದೆ ಕಂಡುಬರುವರು. ಹೀಗೆ ಪ್ರತಿಯೊಂದು ವಿದೇಶದ ಸೇವಾಕೇಂದ್ರದಲ್ಲಿ ತನ್ನ ತನ್ನ ವಿಶೇಷತೆ ಇದೆ. ಆದ್ದರಿಂದ ಎಲ್ಲವೂ ಮೊದಲನೆಯ ಸ್ಥಾನದಲ್ಲಿಯೇ ಇವೆ. ಕೆನೆಡಾವೂ ಸಹ ಈಗ ಇದರಲ್ಲಿ ಸ್ಥಾನವನ್ನು ಗಳಿಸುತ್ತಾ ಇದೆ ಸಿದ್ಧವಾಗುತ್ತಾ ಇದೆ. ಅದೇನೆಂದರೆ ಅಲ್ಲಿಂದ ಒಬ್ಬರು ಜ್ಞಾನದಲ್ಲಿ ಬಂದುಬಿಟ್ಟರೆ ಸಹಜವಾಗಿಯೇ ಒಬ್ಬರು ಅನೇಕರನ್ನು ಕರೆತರಬಹುದು. ಭರವಸೆಗೆ ಪಾತ್ರ ಆಗಿದೆ. ಒಬ್ಬರು ಬಂದರೂ ಸಾಕು, ಆಮೇಲೆ ತಡ ಆಗುವುದಿಲ್ಲ. ಅಂತ್ಯದಲ್ಲಿ ಬಂದವರು ತೀವ್ರವೇಗದಲ್ಲಿ ಹೋಗುವರು ಚೆನ್ನಾಗಿ ಶ್ರಮಿಸುತ್ತಿದ್ದೀರಿ, ತತ್ಪರತೆಯು ಚೆನ್ನಾಗಿದೆ. ಶುಭ ಭಾವನೆಯು ಚೆನ್ನಾಗಿದೆ. ಶುಭಭಾವನೆಯು ತನ್ನ ಫಲವನ್ನು ಅವಶ್ಯವಾಗಿ ಕೊಡುತ್ತದೆ.

ಆದರೆ ವಿದೇಶದ ಭೂಮಿಯಲ್ಲಿ ಸದಾ ಉತ್ಸಾಹ ಉಲ್ಲಾಸವನ್ನು ಹೆಚ್ಚಿಸಲು ನಿಮಿತ್ತ ಆಗಿರುವ ಜಾನಕಿಯವರದು ಮಹತ್ಕಾರ್ಯ ಆಗಿದೆ. ಅವರು ಪಣ ತೊಟ್ಟಿದ್ದಾರೆ. ವಿನಾಶದ ಸಮಯವು ಎಷ್ಟೆಷ್ಟು ಸಮೀಪ ಬರುತ್ತಾ ಹೋಗುವುದೋ ಆಗ ವಾತಾವರಣವನ್ನು ನೋಡಿ ಸಂದೇಶ ಕೊಡುವ ನಿಮ್ಮನ್ನು ಹುಡುಕಿಕೊಂಡು ಬರುವರು. ಅವರಿಗೆ ತಂದೆಯ ಪರಿಚಯವನ್ನು ಕೊಟ್ಟರೆ ಇವರು ಎಂತಹ ಸೂಕ್ಷ್ಮ ದೇವತೆ ಆಗಿದ್ದರು ಎಂದು ನೆನಿಸಿಕೊಳ್ಳುವರು. ಸೇವೆಯಲ್ಲಿ ಎಲ್ಲಿಯೇ ಕಾಲಿಟ್ಟರೂ ಅಲ್ಲಿ ಸಫಲತೆ ಆಗದಿರುವುದು ಸಾಧ್ಯವಿಲ್ಲ. ಒಂದೊಂದು ಭೂಮಿಯು ಬೇಗ ಫಲವನ್ನು ಕೊಡುತ್ತದೆ. ಒಂದೊಂದು ಭೂಮಿಯು ಫಲ ಕೊಡುವುದರಲ್ಲಿ ಸಮಯ ತೆಗೆದುಕೊಳ್ಳುತ್ತದೆ, ಆದರೆ ಫಲವನ್ನು ಕೊಟ್ಟೇ ಕೊಡುತ್ತದೆ. ಹೇಗೆ ಭಾರತದಲ್ಲಿ ರೈಲು ಬಂಡಿಯು ಹೋದಾಗ ಮಧ್ಯೆ ನಿಮ್ಮ ಸೇವಾಕೆಂದ್ರವು

ದೊರೆಯುತ್ತದೆಯೋ ಹಾಗೆಯೇ ವಿಮಾನವು ಎಲ್ಲೆಲ್ಲಿ ನಿಲ್ಲುತ್ತದೆಯೋ ಅಲ್ಲಲ್ಲಿ ಸೇವಾಕೇಂದ್ರವು ಇರಬೇಕು. ಹಾಗೆಯೇ ಆಗಲಿದೆ. ವಿದೇಶಿಯರ ಓಟದ ಸ್ಪರ್ಧೆಯು ಚೆನ್ನಾಗಿ ನಡೆಯುತ್ತಾ ಇದೆ. ಒಳ್ಳೆಯದು.

**ತಂಡಗಳೊಂದಿಗೆ.**

1. ವೃತ್ತಿಯು ಚಂಚಲ ಆಗುವ ಕಾರಣ ಹಾಗೂ ಅಚಲ ಆಗುವ ಸಹಜ ಯುಕ್ತಿ:

ವೃತ್ತಿಯು ಚಂಚಲ ಆಗುವ ಕಾರಣವೇನೆಂದರೆ 'ಏಕೆ' ಹಾಗೂ `ಏನು' ಎನ್ನುವ ಎರಡು ಶಬ್ದಗಳೇ ವಿಚಲತೆಯಲ್ಲಿ ತಂದುಬಿಡುತ್ತವೆ. ಆದರೆ 'ಇದೇನೂ ಹೊಸದಲ್ಲ' ಎನ್ನುವ ಮಾತು ಅಚಲರನ್ನಾಗಿ ಮಾಡಿ ಬಿಡುತ್ತದೆ. ಆಗಲೇಬೇಕು ಹಾಗೂ ಆಗಿಯೇ ಬಿಟ್ಟಿದೆ ಎನ್ನುವುದರ ಹೊರತು ಬೇರೆಯಾವ ಮಾತೂ ಬುದ್ಧಿಯಲ್ಲಿದ್ದರೆ 'ಏಕೆ' ಹಾಗೂ 'ಏನು' ಎನ್ನುವುದು ಕೊನೆ ಆಗಿಬಿಡುತ್ತದೆ. ಯಾವುದೇ ಪ್ರಸಂಗವ ಮನಸ್ಸಿನದಾಗಲಿ ಮಾತಿನದಾಗಲಿ ಅಥವಾ ಸಂಪರ್ಕ, ಸಂಬಂದದ್ದಾಗಲಿ ಸಂಭವಿಸಿದರೆ ಇದೇನೂ ಹೊಸತಲ್ಲ ಎಂದು ತಿಳಿಯಿರಿ. 'ಏಕೆ' ಎನ್ನುವ ಪ್ರಶ್ನೆ ಅಥವಾ ಆಶ್ಚರ್ಯ ಬರುವುದಿಲ್ಲ. ಇದೇ ಪಾಠವನ್ನು ಪುನಹ ಪಠನ ಮಾಡಿ ಪಕ್ಕಾಮಾಡಿಕೊಳ್ಳಿರಿ.

2. ಮಾಯೆಯ ದಾಳಿಯಿಂದ ಸುರಕ್ಷಿತವಾಗಿ ಸದಾ ವಿಜಯಿ ರತ್ನ ಆಗುವ ವಿಧಿ:

ಮಾಸ್ಟರ್ ಸರ್ವಶಕ್ತಿವಂತನ ಸ್ಥಿತಿಯಲ್ಲಿ ಸ್ಥಿತರಾಗಿರಿ. ಮಾಸ್ಟರ್ ಸರ್ವಶಕ್ತಿವಂತ ಎಂದರೆ ವಿಜಯಶಾಲಿರತ್ನ, ಮಾಯೆಯು ಒಳಗಡೆ ಪೂರ್ತಿ ಶಕ್ತಿಹೀನ ಆಗಿದೆ. ಅದರ ಬಾಹ್ಯದ ರೂಪವನ್ನು ನೋಡಿ ಗಾಬರಿ ಆಗಬೇಡಿರಿ ಹಾಗೂ ಜೀವಂತವಾಗಿದೆ ಎಂದು ತಿಳಿದು ಮೂರ್ಚಿತರನ್ನು ನೋಡಿಯೂ ಮೂರ್ಚೆ ಹೋಗಿದೆ. ಆದರೆ ಒಮ್ಮೊಮ್ಮೆ ಮೂರ್ಚಿತರನ್ನು ನೋಡಿಯೂ ಮೂರ್ಚಿತರಾಗಿಬಿಡುತ್ತಾರೆ. ಈಗ ಮಾಯೆಯನ್ನು ಆನಂದದಿಂದ ಬೀಳ್ಕೊಡಿರಿ. ಜ್ಞಾನಪೂರ್ಣದ ಸ್ಥಿತಿಯಲ್ಲಿ ಇದ್ದರೆ ಎಂದಿಗೂ ಮೋಸ ಹೋಗುವುದಿಲ್ಲ.

3. ಅಮರನಾಥ ತಂದೆಯ ಮೂಲಕ ಸಂಗಮದಲ್ಲಿಯೂ ಸದಾ ಅಮರ ಆಗಿರುವ ವರದಾನ:

ಅಮರಭವ ಎನ್ನುವ ವರದಾನವು ಈ ಜನ್ಮದಲ್ಲಿಯೂ ಹಾಗೂ ಭವಿಷ್ಯದಲ್ಲಿಯೂ ಪ್ರಾಪ್ತಿ ಆಗುತ್ತದೆ. ಸಂಗಮದಲ್ಲಿ ಮಾಯೆಯಿಂದ ಸುರಕ್ಷಿತ ಆಗಿರುವ ಅಮರ ವರದಾನ ಹಾಗೂ ಭವಿಷ್ಯದಲ್ಲಿ ಅಕಾಲಮೃತ್ಯುವಿನಿಂದ ಸುರಕ್ಷತವಾಗಿರುವ ವರದಾನವು ದೊರೆತಿದೆ. ಅಮರಭವದ ವರದಾನವನ್ನು ಪಡೆಯುವವರನ್ನು ಮಾಯೆಯು ಅಲುಗಾಡಿಸಲಾರದು. ಅವರ ಮೇಲೆ ದೂರದಿಂದ ದೃಷ್ಟಿಯನ್ನೂ ಬೀರಲಾರದು. ಸದಾ ನಮಸ್ಕಾರ ಮಾಡುತ್ತದೆ. ನಮಗೆ ಅಮರಭವದ ವರದಾನವು ಸಿಕ್ಕಿದೆ ಎನ್ನುವುದನ್ನು ಸದಾ ಸ್ಥಿತಿಯಲ್ಲಿಟ್ಟುಕೊಳ್ಳಿರಿ. ವರದಾನ ಪಡೆದಿರುವ ಆತ್ಮವು ನಿಶ್ಚಯಬುದ್ಧಿ ಆಗಿರುವ ಕಾರಣದಿಂದ ವಿಜಯಶಾಲಿ ಆಗುತ್ತದೆ. ಯಾರಿಗೆ ಈ ವರದಾನದ ನಶೆ ಇರುತ್ತದೆಯೋ ಅವರು ಸ್ವಪ್ನದಲ್ಲಿಯೂ ಮಾಯೆಯಿಂದ ಮೂರ್ಚಿತರಾಗುವುದು ಅಸಂಭವ. ತಂದೆಯ ಮೂಲಕ ವರದಾನವು ದೊರೆಯುವುದು ಕಡಿಮೆಯ ಮಾತೇನು? ಸದ್ಗುರುವು ಸ್ವಯಂ ವರದಾನವನ್ನು ಕೊಡುತ್ತಿರುವಾಗ ಎಷ್ಟು ನಶೆ ಇರಬೇಕು. ಓಂ ಶಾಂತಿ.

ರಿವೈಜ್ ಕೋರ್ಸ್/ಅವ್ಯಕ್ತ ಮುರಳಿ 07-01-1978.

***ವಿದೇಶಿ ತಂದೆಯ ವಿದೇಶಿ ಮಕ್ಕಳೊಂದಿಗಿನ ವಾರ್ತಾಲಾಪ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ "ಪಡೆಯಬೇಕಾದದ್ದನ್ನು ಪಡೆದಿದ್ದೇನೆ" ಎಂಬ ಆನಂದದ ಹಾಡನ್ನು ಹಾಡುತ್ತಿದ್ದೇನೆ.

2. ನನ್ನ ಚಹರೆಯಿಂದ ತಂದೆಯ ಮೂಲಕ ಪ್ರಾಪ್ತಿಯಾಗಿರುವ ಅವಿನಾಶಿ ಸಂತೋಷ (ಖುಷಿ), ಅತೀಂದ್ರಿಯ ಸುಖ, ಅವಿನಾಶಿ ಶಾಂತಿಯ ವಾರಸತ್ವದ(ಆಸ್ತಿಯ) ಕನ್ನಡಿಯಂತೆ ತಯಾರಾಗಿ ಬಾಪ್‌ದಾದಾರವರಿಂದ ಹೆಚ್ಚಿನ ಅಂಕಗಳ ಬಹುಮಾನವನ್ನು ಪಡೆದಿದ್ದೇನೆ.

3. ನಾನು ಲೈಟ್(ಜ್ಞಾನದ ಪ್ರಕಾಶ), ಮೈಟ್(ಶಕ್ತಿ) ಸ್ವರೂಪವಾಗಿ ಸರ್ವಾತ್ಮರನ್ನು ತಂದೆಯ ಕಡೆಗೆ ಆಕರ್ಷಣೆ ಮಾಡಿದ್ದೇನೆ.

4. ನಾನು ಮಾಯೆಯೊಂದಿಗೆ "ಬಾ ಹಾಗೂ ಬೀಳ್ಕೊಡುಗೆಯನ್ನು ತೆಗೆದುಕೊಂಡು ಹೋಗು" ಎಂಬ ಸವಾಲನ್ನು ಮಾಡುವ ಧೈರ್ಯ ಸ್ವರೂಪ.

5. "ನಾನು 108ರ ಮಾಲೆಯಲ್ಲಿರುವ ಮಣಿ" ಎಂಬ ನಿಶ್ಚಯದಿಂದ ವಿಜಯವನ್ನು ಪಡೆದಿರುವ ವಿಜಯೀರತ್ನ.

6. ನಾನು ಒಂದು ಕ್ಷಣದಲ್ಲಿ ದೇಹಾಭಿಮಾನ ಎಂಬ ವಸ್ತ್ರವನ್ನು ಬಿಟ್ಟು ಸಹಜವಾಗಿ ಅಶರೀರಿ ಆಗಿದ್ದೇನೆ.

7. ನಾನು ಮನಸಾ, ವಾಚಾ, ಕರ್ಮಣಾ, ಸಂಬಂಧಗಳಲ್ಲಿ ಅತೀತವಾಗುವ ಅಭ್ಯಾಸವನ್ನು ಸಹಜವಾಗಿ ಮಾಡಿಕೊಂಡಿದ್ದೇನೆ.

8. ನಾನು ಸಂಕಲ್ಪ ಮಾಡಿದಾಕ್ಷಣ ಸ್ವರೂಪವಾಗುವ ಅಭ್ಯಾಸ ಮಾಡಿ ವಿಧ್ಯಾರ್ಥಿ ವೇತನವನ್ನು ಪಡೆದಿದ್ದೇನೆ.

9. ನಾನು ಸ್ವಯಂನೊಂದಿಗೆ ಹಾಗೂ ಸೇವೆಯಲ್ಲಿ ಸಂತುಷ್ಟವಾಗಿ ಇದ್ದೇನೆ.